# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಎಂ.ಸಿ.ವೇಣುಗೋಪಾಲ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | : | 1322 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಕೃಷಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 18-03-2020 |

| | | |
|---|---|---|
| ಅ | ರಾಜ್ಯದ ಕೃಷಿ ವಿಶ್ವ ವಿದ್ಯಾಲಯಗಳಲ್ಲಿ ಬೋಧಕ ಹಾಗೂ ಬೋಧಕೇತರರ ನೌಕರರುಗಳ ಜಾಗ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ | ಬಂದಿದ್ದಲ್ಲಿ, ಭರ್ತಿ ಮಾಡಲು ಕೈಗೊಂಡಿರುವ ಕ್ರಮಗಳೇನು; | (ಕೆಳಗಿನ ಕೋಷ್ಟಕ) |

| | ಭರ್ತಿ ಮಾಡಲು ಕೈಗೊಂಡಿರುವ ಕ್ರಮ |
|---|---|
| ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು | ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ಇಲ್ಲಿ ಖಾಲಿ ಇರುವ ಹುದ್ದೆಗಳ ಪೈಕಿ ಸಂಶೋಧನೆ/ವಿಸ್ತರಣೆಯ 34 ಬೋಧಕರ ಹುದ್ದೆ, ತಂತ್ರಜ್ಞಾನ ವಿಸ್ತರಣೆಯ 17 ಬೋಧಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಹಾಗೂ ತಂತ್ರಜ್ಞಾನ ವಿಸ್ತರಣೆಯ 30 ಬೋಧಕೇತರ ಹುದ್ದೆ ಹಾಗೂ ಸರ್ಕಾರದ ಅನುದಾನಿತ 34 ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಅನುಮತಿ ನೀಡಲಾಗಿದ್ದು, ನೇಮಕಾತಿ ಜಾರಿಯಲ್ಲಿರುತ್ತದೆ. |
| ಕೃಷಿ ವಿಶ್ವವಿದ್ಯಾಲಯ, ಧಾರವಾಡ | ಕೃವಿವಿ ಧಾರವಾಡದಲ್ಲಿ 63 ಸಹಾಯಕ/ಸಹಾಯಕ-ಕಮ್-ಕಂಪ್ಯೂಟರ್ ಆಪರೇಟರ್ ಹುದ್ದೆಗಳ ಭರ್ತಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಇದಲ್ಲದೆ, ಹೈದ್ರಾಬಾದ್ ಕರ್ನಾಟಕ ವೃಂದದಡಿ ಒಟ್ಟು 42 ಹುದ್ದೆಗಳ ಭರ್ತಿಗಾಗಿ ದಿನಾಂಕ:24.12.2019 ರಂದು ಜಾಹೀರಾತುಪಡಿಸಲಾಗಿದೆ.<br>ಮುಂದುವರೆದು, ಬ್ಯಾಕ್ ಲಾಗ್ ಅಡಿಯಲ್ಲಿ ಖಾಲಿ ಇರುವ ಒಟ್ಟು 11 ಹುದ್ದೆಗಳಿಗೆ ಮಾನ್ಯ ಘನತೆವೆತ್ತ ರಾಜ್ಯಪಾಲರು ಅನುಮೋದನೆ ನೀಡಿದ್ದು, ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುವುದು. |
| ರಾಯಚೂರು, ಕೃಷಿ | ರಾಯಚೂರು ಕೃವಿವಿಯಲ್ಲಿ 236 ಹುದ್ದೆಗಳಿಗೆ ಜಾಹಿರಾತು ಹೊರಡಿಸಿ |

| | | | |
|---|---|---|---|
| | | ವಿಶ್ವವಿದ್ಯಾಲಯ | ನೇಮಕಾತಿಗಾಗಿ ಕ್ರಮಕೈಗೊಳ್ಳಲಾಗುತ್ತಿದೆ. |
| | | ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ | ಕೃ.ತೋ.ವಿ.ವಿ. ಶಿವಮೊಗ್ಗದಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ಬೋಧಕ ವೃಂದದ 190 ಹುದ್ದೆಗಳನ್ನು ಹಾಗೂ ಬೋಧಕೇತರ ವೃಂದದ 89 ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ದಿನಾಂಕ:30.01.2017 ರಂದು ಅನುಮತಿಯನ್ನು ನೀಡಿಲಾಗಿದೆ. ಅದರಂತೆ ಸಹಾಯಕ ಪ್ರಾಧ್ಯಾಪಕ 109 ಹುದ್ದೆಗಳನ್ನು ಭರ್ತಿ ಮಾಡಲು ಅಧಿಸೂಚನೆ ಹೊರಡಿಸಿರುತ್ತದೆ. |
| ಇ | ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳಲ್ಲಿ 2015 ರಿಂದ ಎಷ್ಟು ಹೊಸ ಕೃಷಿ ತೋಟಗಾರಿಕೆ ಮತ್ತು ಪಶು ವೈದ್ಯ ಕಾಲೇಜುಗಳನ್ನು ತೆರೆಯಲಾಗಿದೆ ; | ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಅಧೀನದಲ್ಲಿ ಜಿಕೆವಿಕೆ ಆವರಣದಲ್ಲಿರುವ ಕೃಷಿ ಇಂಜಿನಿಯರಿಂಗ್ ವಿಭಾಗವನ್ನು ಪ್ರತ್ಯೇಕ ಕೃಷಿ ಇಂಜಿನಿಯರಿಂಗ್ ಕಾಲೇಜ್ ಆಗಿ 2018ನೇ ವರ್ಷದಲ್ಲಿ ಉನ್ನತೀಕರಿಸಲಾಗಿರುತ್ತದೆ.<br>ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ನೂತನ ಕೃಷಿ ಕಾಲೇಜನ್ನು 2018ರಲ್ಲಿ ಆರಂಭಿಸಲಾಗಿರುತ್ತದೆ. | |
| ಈ | ಇವುಗಳಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಮಾನ್ಯತೆ ಇದೆಯೇ; ಇದ್ದಲ್ಲಿ, ಬಿಡುಗಡೆಯಾದ ಅನುದಾನವೆಷ್ಟು ; | ಚಾಮರಾಜನಗರ ಜಿಲ್ಲೆಯಲ್ಲಿ ಆರಂಭಿಸಲಾದ ನೂತನ ಕೃಷಿ ಕಾಲೇಜಿಗೆ ಆರಂಭಿಕವಾಗಿ ರೂ.31.50 ಕೋಟಿಗಳ ಅನುದಾನಕ್ಕಾಗಿ ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ. | |
| ಉ | ನೇಮಕ ಮಾಡಲಾದ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳೆಷ್ಟು? (ವಿವರ ನೀಡುವುದು) | (see table below) | |

| | ವಿವರ | |
|---|---|---|
| | ಬೋಧಕ | ಬೋಧಕೇತರ |
| ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು | 430 | 596 |
| ಕೃಷಿ ವಿಶ್ವವಿದ್ಯಾಲಯ, ರಾಯಚೂರು | 2019ರಲ್ಲಿ 371ಜೆ ಅಡಿ ಬೋಧಕರ 23 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗಿದೆ. | |
| ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ | ಶಿವಮೊಗ್ಗ ಕೃತೋವಿವಿಯಲ್ಲಿ ಅಧಿಕಾರಿ ವೃಂದದ ಹುದ್ದೆಗಳು 9 ಹಾಗೂ ಅನುಕಂಪದ ಆಧಾರದ ಮೇಲೆ ನೇಮಕಾತಿ 12 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. | |

ಸಂಖ್ಯೆ: AGRI-AUM/ 12 /2020

(ಬಿ.ಸಿ ಪಾಟೀಲ್) 16/3/2020
ಕೃಷಿ ಸಚಿವರು